ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 4, September-October 2024, Pp.157-159
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಭೂತ ಕಾಲದ ಪದವೂ – ಭೂತಾಕಾರವೂ

**ಡಾ.ಎನ್.ಮಹೇಶ್ವರಿ**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಜೆಎಸ್ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಮೈಸೂರು.

***Abstract:***

*ಸಾರಾಂಶ:*

*ಕುಮಾರವ್ಯಾಸ ಕನ್ನಡ ಭಾಷೆಯ ನಾಡಿ ಮಿಡಿತವನ್ನು ಬಲ್ಲವನು. ಹಿಂದಿನ ಕವಿಗಳ ಕಾವ್ಯಗಳನ್ನ ಅವಲೋಕಿಸಿದ್ದೂ ಅದಕ್ಕಿಂತ ಭಿನ್ನವಾದ ಅಭಿವ್ಯಕ್ತಿಯನ್ನ ಮಾಡಿದವನು. ಅದಕ್ಕೆ ಮೂಲ ಕಾರಣ ಕೃಷ್ಣನ ಬಗೆಗಿನ ಅವನ ಅಪಾರವಾದ ಭಕ್ತಿ. ಈ ಕಾವ್ಯದಲ್ಲಿ ಸಂಪೂರ್ಣ ಅದರದೇ ಹರಿವು. ಕಾವ್ಯವೊಂದರ ನಾಯಕನನ್ನಾಗಿ ಮಾಡಿ ಅದರಡಿಯಲ್ಲಿ ಎಲ್ಲವನೂ ತೆರೆದಿಡುವ ಕುಮಾರವ್ಯಾಸನ ಶಬ್ದಶಕ್ತಿ ಮತ್ತು ಪರಿಣಾಮಕಾರಿಯಾದ ಶೈಲಿ ಅತ್ಯದ್ಭುತ. ನಡುಗನ್ನಡದಲ್ಲಿನ ಶೈವ ಕವಿಗಳು ಹಾಕಿಕೊಟ್ಟ ವಸ್ತು, ನಿರೂಪಣಾ ಶೈಲಿಯಿಂದಾಚೆಗೆ ಮತ್ತೊಂದನ್ನ ಅವರ ಕಾಲದಲ್ಲಿಯೇ ಬಳಕೆಯಲ್ಲಿದ್ದ ಛಂದೋ ಪ್ರಕಾರದಲ್ಲಿ ಕಟ್ಟಿಕೊಡುವುದು ದೊಡ್ಡ ಸವಾಲೇ ಸರಿ. ಆದರೂ ಅದರಲ್ಲಿ ಯಶಸ್ವಿಯೂ ಆಗಿದ್ದಾನೆನ್ನಲು ಇಂದಿಗೂ ಇವನ ಕಾವ್ಯದ ಓದು ನಡೆಯುತ್ತಲೇ ಇರುವುದು. ಮತ್ತೂ ಮತ್ತೂ ಕುಮಾರವ್ಯಾಸನನ್ನ ಓದುತ್ತಲೇ ಭಾಷೆಯ ಬಗೆಗಿನ ಅಭಿಮಾನ ಮೂಡುತ್ತದೆನ್ನುವುದರಲ್ಲಿ ಯಾವುದೇ ಅನುಮಾನವಿಲ್ಲ.*

**Keywords:** *ಕನ್ನಡ ಸಾಹಿತ್ಯ, ಕುಮಾರವ್ಯಾಸ, ಅರಣ್ಯ ಪರ್ವ, ಸೌಗಂಧಿಕಾ ಪರಿಣಯ.*

**ಪೀಠಿಕೆ**

ಅರಣ್ಯ ಪರ್ವವು ಮಹಾಕಾವ್ಯ ಮಹಾಭಾರತದಲ್ಲಿ ವನ ಪರ್ವ ಅಥವಾ ಅರಣ್ಯಕ ಪರ್ವ ಎಂದು ಹೆಸರಿಸಲಾದ ಮೂರನೇ ಮಹಾ ಪರ್ವದಲ್ಲಿ ಒಳಗೊಂಡಿರುವ ಇಪ್ಪತ್ತೊಂಬತ್ತನೇ ಉಪ ಪರ್ವವಾಗಿದೆ. ಸಂಪೂರ್ಣವಾಗಿ ಹದಿನೆಂಟು ಮಹಾಪರ್ವಗಳಿವೆ, ಮೂಲತಃ ಸಂಸ್ಕೃತದಲ್ಲಿ ಬರೆಯಲಾಗಿದೆ. ವೈಶಂಪಾಯನನು ತನ್ನ ಪ್ರಶ್ನೆಗಳ ಮೇಲೆ ಯುಧಿಷ್ಠಿರನಿಂದ ಅಕ್ಷಯಪಾತ್ರವನ್ನು ಸಂಗ್ರಹಿಸುವುದು ಸೇರಿದಂತೆ ಕಾಡಿನಲ್ಲಿ ಸಂಭವಿಸಿದ ಐತಿಹಾಸಿಕ ಘಟನೆಗಳನ್ನು ಜನಮೇಜಯನಿಗೆ ವಿವರಿಸಿದ್ದಾನೆ.

ಕುಮಾರವ್ಯಾಸ ಕಥೆ ಹೇಳುವುದರಲ್ಲಿ ಬಹಳ ನಿಸ್ಸೀಮ, ಕಥನಕಲೆ ಅವನಿಗೆ ಉಸಿರಿನಷ್ಟೇ ಸಹಜವಾಗಿ ಬಂದದ್ದು ಎಂದರೆ ಅತಿಶಯೋಕ್ತಿಯಲ್ಲ. ಆದರೆ ಕಥೆಯನ್ನು ಕಣ್ಣು ಮುಂದೆಯೇ ನಡೆಯುವಂತೆ ಕಟ್ಟುವ ಕಲೆ ಇವನಲ್ಲಿ ಬಹಳವಾಗಿ ಯಶಸ್ವಿಯಾಗಿದೆ. ಅದಕ್ಕೆ ಕುವೆಂಪು ಅವರು – "ಕುಮಾರವ್ಯಾಸನು ಹಾಡಿದನೆಂದರೆ ಕಲಿಯುಗ ದ್ವಾಪರವಾಗುವುದು, ಭಾರತ ಕಣ್ಣಲಿ ಕುಣಿಯುವುದು" ಎಂದಿರುವುದು. ಬಹುಶಃ ಇದನ್ನೇ 'ನಾಟಕೀಯತೆ' (Dramatization) ಎನ್ನಬಹುದೇನೊ. ಇದು

***Please cite this article as:*** ಮಹೇಶ್ವರಿ ಎನ್.(2024). ಭೂತ ಕಾಲದ ಪದವೂ – ಭೂತಾಕಾರವೂ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್,* 3(4), 157–159

ಕಾವ್ಯವೊಂದರ ಯಶಸ್ಸಿನ ಬಹಳ ದೊಡ್ಡ ತಂತ್ರ. ಇದು ಹಿಂದಿನ ಪರಂಪರೆಯಲ್ಲಿ ಸಾಕಷ್ಟು ಸಿಕ್ಕರೂ, ಇವನಲ್ಲಿ ಅದು ಹೊಳೆ ಹೊಳೆವ ರೀತಿಯಲ್ಲಿ ಕಾವ್ಯದ ಸಂದರ್ಭದಲ್ಲಿಮುಖಾಮುಖಿ ಆದಾಗ ಓದುಗನೊಮ್ಮೆ ಮೂಗಿನ ಮೇಲೆ ತನಗರಿವಿಲ್ಲದಂತೆ ಕೈ ಇಡುತ್ತಾನೆ. ಬಹುಶಃ ಭಾಗವತ ಪರಂಪರೆಯಲ್ಲಿನ ಕಾವ್ಯವಾಚನಕ್ಕೆ ಅಥವಾ ಗಮಕವಾಚನಕ್ಕೆ ಹೇಳಿ ಮಾಡಿಸಿದಂತೆ ಇವನ ಕಾವ್ಯ ಸಹಕಾರಿಯಾಗಿರುವುದಕ್ಕೆ ಇದೂ ಒಂದು ಕಾರಣವೆನ್ನಬಹುದು.

***ನೋಡಿದನು ನಡುಗಿದನು ಕಂಗಳ***
***ಕೋಡಿಯಲಿ ನೀರೊರೆಯೆ ಹರಿಷದ***
***ರೂಢಿಯಲಿ ಜೊಮ್ಮೆದ್ದು ಮನ ಡೆಂಡಣಿಸಿ ಭೀತಿಯಲಿ***
***ಬಾಡುಮೋರೆಯನೆತ್ತಿ ಕೈಗಳ***
***ನೀಡಿ ಕಂಗಳ ಮುಚ್ಚಿ ಮರಳಿದು***
***ನೋಡಿ ಶಿವಶಿವಾಯೆನುತ ಬೆಚ್ಚಿದನಡಿಗಡಿಗೆ ಭೀಮ***

(ಕುಮಾರವ್ಯಾಸ ಭಾರತದಲ್ಲಿ ಸೌಗಂಧಿಕಾ ಪುಷ್ಪವನ್ನು ತರಲು ಹೊರಟ ಭೀಮ ಹನುಮಂತನನ್ನು ಭೇಟಿಯಾಗುವ ಪ್ರಸಂಗದ ಒಂದು ಷಟ್ಪದಿ)

ಅರಣ್ಯ ಪರ್ವದಲ್ಲಿನ ಸೌಗಂಧಿಕಾ ಪರಿಣಯದ ಈ ಪದ್ಯವನ್ನು ನನ್ನ ಓದಿನ ಮಿತಿಯಲ್ಲಿಯೇ ಹೇಳುವುದಾದರೆ ಒಟ್ಟಾರೆ ಕುಮಾರವ್ಯಾಸನ ಕಾವ್ಯದ ಉದ್ದೇಶದ ಸಾಕಾರತೆಗೆ ಹಿಡಿದ ಕನ್ನಡಿಯಾಗಿದೆ. ಅಂದರೆ ಕಾವ್ಯದ ಒಟ್ಟಾರೆ ಉದ್ದೇಶವಾದ ದೈವೀ ಶಕ್ತಿಯ ಮುಂದೆ ಮಾನುಷೀ ಶಕ್ತಿಯ ಸ್ಥಿತಿಯನ್ನೇ ಹೇಳುವುದಾಗಿದೆ. ಈ ಷಟ್ಪದಿಯು ಮತ್ತು ಒಟ್ಟಾರೆ ಕಾವ್ಯವೂ ಅದನ್ನೇ ಹೇಳುವುದನ್ನ ನೋಡಿದರೆ ಓದುಗರಿಗೆ ಬೆರಗಾಗುವುದರಲ್ಲಿ ಸಂಶಯವೇ ಇಲ್ಲ.

ಈ ಭಾಗದಲ್ಲಿ ಕುಮಾರವ್ಯಾಸನ ಒಟ್ಟು 70 ಷಟ್ಪದಿ ಬಂದರೆ, ಪಂಪ ಕೆಲವೇ ಕೆಲವು ಸಾಲುಗಳಲ್ಲಿ ಕಥೆ ಹೇಳಿ ಮುಗಿಸುತ್ತಾನೆ. (ಇದಕ್ಕೆ ಇವರಿಬ್ಬರ ದೃಷ್ಟಿಕೋನದ ವ್ಯತ್ಯಾಸವೇ ಕಾರಣವೆಂದರೆ ತಪ್ಪಿಲ್ಲ) ಕುಮಾರವ್ಯಾಸನೇ ಹೇಳುವಂತೆ 'ಅತಿ ವಿಚಾರಿಸಿ ನೋಡೆ ಬರಿಯ ತುಳಸಿಯ ಉದಕದಂತಿರೆಯಲ್ಲಿ, ನೋಳ್ಪುದು ಪದುಮನಾಭನ ಚರಿತೆಯನು ಧರ್ಮವಿಚಾರ ಮಾತ್ರವನು' ಅನ್ನುವ ಸಾಲುಗಳು ಒಟ್ಟಾರೆ ಅವನ ಉದ್ದೇಶವನ್ನು ತಿಳಿಸುತ್ತದೆ. ದೈವೀ ಶಕ್ತಿಯೆಂದು ತಾ ನಂಬಿರುವ ಕೃಷ್ಣನ ಜಯವಲ್ಲದೇ, ಅವನ ಪ್ರೀತಿಯ ತುಳಸಿಯ ಮೇಲಿನ ಉದಕದ ಪಾವಿತ್ರ್ಯತೆಯನ್ನೂ ಇಲ್ಲಿ ಹೇಳುತ್ತಿದ್ದಾನೆ. (ಜಯದೇವ ಕವಿ ತನ್ನ 'ಗೀತಗೋವಿಂದ' ಎಂಬ ಸಂಸ್ಕೃತ ಕಾವ್ಯದಲ್ಲಿ ತುಳಸಿಗೆ ಕೊಟ್ಟಿರು**ವ** ಮಹತ್ವ ಇವನ ಕಾವ್ಯದ ಮೇಲೆ ಪ್ರಭಾವ ಬೀರಿರಲೂಬಹುದು – 'ಸಖಿಯಾ ರಮಿತಾ ವನಮಾಲಿನಾ'. ಜಯದೇವನಲ್ಲಿ ಎಲ್ಲಿಯೂ ತುಳಸಿಯಿಲ್ಲದೆ ಕೃಷ್ಣನಿಲ್ಲ)

ಅರಣ್ಯಪರ್ವದಲ್ಲಿಯೇ ಪಾಂಡವರನ್ನು ಮುಂದಿನ ಮಹಾಕದನಕ್ಕೆ ದೈಹಿಕವಾಗಿ ಮತ್ತು ಮಾನಸಿಕವಾಗಿ ಸಧೃಡಗೊಳಿಸುವ, ಮತ್ತು ಧರ್ಮಯುದ್ಧಕ್ಕೆ ಬೇಕಾಗಿರುವ ಎಲ್ಲ ವಿಧೇಯ– ವಿನಯ ಗುಣಗಳನ್ನು ಅವರಿಗೆ ಕೊಟ್ಟು ಸಂಸ್ಕಾರಗೊಳಿಸುವ ಉದ್ದೇಶವಿರುವಂತೆಯೂ ಅನಿಸುತ್ತದೆ. (ಅರ್ಜುನನಿಗೆ ಶಿವನ ಪರೀಕ್ಷೆ, ಧರ್ಮರಾಯನಿಗೆ ಯಕ್ಷಪ್ರಶ್ನೆಯ ರೂಪದಲ್ಲಿ ಯಮಧರ್ಮನ ಪರೀಕ್ಷೆ, ಭೀಮನಿಗೆ ಅವನ ಬಾಹುಬಲದ ಮೇಲಿದ್ದ ಆತ್ಮವಿಶ್ವಾದ ಬಗೆಗೆ ಹನುಮಂತನ ಪರೀಕ್ಷೆ. ಇಲ್ಲಿ ಭೀಮನನ್ನಷ್ಟೇ ಗಮನಿಸಬಹುದು)

ಈ ಎಲ್ಲಾ ಪ್ರಮುಖವಾದ ಕಾರಣಗಳಿಂದ ಕುಮಾರವ್ಯಾಸನ ಈ ಒಂದು ಷಟ್ಪದಿಯನ್ನ ನೋಡುವುದು ಬಹಳ ಸೊಗಸು ಎನಿಸುತ್ತದೆ. ದೈವೀ–ಮಾನುಷೀ ಶಕ್ತಿಗಳ ಮುಖಾಮುಖಿ, ಕಥೆ ಹೇಳುವ ಕ್ರಮ, ಅದರೊಂದಿಗಿನ ಆಂಗಿಕಾಭಿನಯ, ಇಷ್ಟೆಲ್ಲವನ್ನು ಒಂದೇ ಒಂದು ಷಟ್ಪದಿಯಲ್ಲಿ ತರುವುದೆಂದರೆ ನಿಜವಾಗಿಯೂ ಅದು ಅತ್ಯಂತ ಸೂಕ್ಷ್ಮ ಕುಸುರಿಯ ಕೆಲಸವೇ ಸರಿ.

*ನೋಡಿದನು ನಡುಗಿದನು ಕಂಗಳ*
*ಕೋಡಿಯಲಿ ನೀರೊರೆಯೆ ಹರಿಷದ*
*ರೂಢಿಯಲಿ ಜೊಮ್ಮೆದ್ದು ಮನ ಡೆಂಡಣಿಸಿ ಭೀತಿಯಲಿ*
*ಬಾಡುಮೋರೆಯನೆತ್ತಿ ಕೈಗಳ*
*ನೀಡಿ ಕಂಗಳ ಮುಚ್ಚಿ ಮರಳಿದು*
*ನೋಡಿ ಶಿವಶಿವಾಯೆನುತ ಬೆಚ್ಚಿದನಡಿಗಡಿಗೆ ಭೀಮ*

ಮೇಲ್ನೋಟಕ್ಕೆ ಇದೊಂದು ಸರಳಾತಿ ಸರಳ ಪದ್ಯ. ಆದರೆ ಕುಮಾರವ್ಯಾಸನ ಕಾವ್ಯದ ಪ್ರಮುಖ ಸ್ಥಿತಿಯೆಂದರೆ ಏಕಕಾಲದಲ್ಲಿ ಕಾವ್ಯದ ಎಲ್ಲಾ ಪಾತ್ರಗಳೂ – ಓದುಗರೂ ಶರಣಾಗುವಂತೆ ಹೇಳುವ ಧಾಟಿ. ಅದರ ಅಡಿಯಲ್ಲಿಯೇ ಕಾವ್ಯವೊಂದರ ನಿರ್ವಚನ ಮಾಡುವ ಕೌಶಲದ ಬಹುದೊಡ್ಡ ವೈಶಾಲ್ಯದ ಕ್ರಮ.

ಮೇಲಿನ ಪದ್ಯ ಭಾಗವು ಮೂವತ್ತೆಂಟನೆಯ ದಾಗಿದ್ದು. ಇದರಲ್ಲಿನ ಕ್ರಿಯಾಪದಗಳು ಭೂತಕಾಲದ್ದಾಗಿದೆ – ನೋಡಿದನು, ನಡುಗಿದನು ಅನ್ನುವುದು. ಕಾವ್ಯದ ಹಿಂದಿನ ಪದ್ಯಗಳನ್ನ ನೋಡಿದರೆ ಅಲ್ಲಿ ವರ್ತಮಾನದಲ್ಲಿ ನಡೆವ ಕಥೆಯನ್ನ ಮತ್ತೆ ಭೂತಕಾಲಕ್ಕೆಳೆದು ಹಿಂದಿನ ಕಥೆಯಿದು ಅನ್ನುವ ಪ್ರಜ್ಞೆಯನ್ನ ಜಾಗೃತಗೊಳಿಸುತ್ತಾನೆ. ಕಂಗಳ ಕೋಡಿಯಲ್ಲಿ ನೀರು ಬಂದಿದ್ದು ಅನ್ನುವುದನ್ನೂ ಸಹಾ ಸೂಕ್ಷ್ಮವಾಗಿ ಹೇಳುತ್ತಾನೆ. ನಾವು ಕಣ್ಣಿಲಿ ನೀರು ಬಂದಿತು ಎಂದರೆ

ಕವಿ ಪ್ರಜ್ಞೆ 'ಕಂಗಳ ಕೋಡಿ' ಎಂದು ಕೊನೆಯ ತುದಿಯನ್ನ ಹೇಳುತ್ತಾನೆ. ಸಂತೋಷದಿಂದ ರೋಮಗಳು ಮೇಲೆ ನಿಂತು ಭಯವಾವರಿಸಿ, ಬಾಡಿದ ಮೋರೆಯ ಮೇಲೆತ್ತಿ, ತನ್ನ ಅಸಹಾಯಕ ಸ್ಥಿತಿಯನ್ನು ಎದುರಿರುವ ಹನುಮಂತನಿಗೆ ತೋರಿಸಲು ಕೈಗಳ ನೀಡಿ ಅವನ ಮುಂದೆ, ಕಣ್ಣನ್ನು ಮುಚ್ಚಿ, ಮತ್ತೆ ಮತ್ತೆ ಅವನನ್ನು ನೋಡುತ್ತಲೇ ಬೆಚ್ಚಿದ ಅನ್ನೋದಕ್ಕೆ ಪೂರಕವಾಗಿ ಇವನು ಬಳಸುವ ಎರಡು ಪ್ರಮುಖ ಪದಗಳಾದ 'ಡೆಂಡಣಿಸಿ' ಅನ್ನುವ ಉದ್ಗಾರವಾಚಕ ಮತ್ತು 'ಶಿವಶಿವಾ' ಎನುವ (ಅಯ್ಯಯ್ಯೋ ಅನ್ನುವುದಕ್ಕೆ ಸಮಾನವಾಗಿ ಬಳಸುವ ಪದ) ಪದಗಳು ಕಾವ್ಯದಲ್ಲಿ ಒಂದು ದೊಡ್ಡ ಪರಿಣಾಮವನ್ನು ಬೀರುತ್ತದೆ ಎಂಬುದು ಅತಿಶಯೋಕ್ತಿಯಲ್ಲ.

ಇದರ ಹಿಂದಿನ ಭಾಗದಲ್ಲಿನ ಪದ್ಯಗಳನ್ನು ಗಮನಿಸಿದರೆ ಕಾಲುರೆ ಕಂಪಿಸಿತು ಕಾನನವ, ಮರಗಳನ್ನು ಮಕ್ಕಳಾಟದಂತೆ ಕಿತ್ತೆಸೆದು ಹೋಗುತ್ತಿದ್ದ ಅವನಲ್ಲಿನ ಬಲಾಢ್ಯತೆ ಮತ್ತು ಏನನ್ನು ಬೇಕಾದರೂ ಸಾಧಿಸುವೆನೆಂಬ ಛಲ ಎರಡೂ ಒಂದೇ ಕ್ಷಣದಲ್ಲಿ ಮಣ್ಣುಪಾಲಾಗುವ ಅನುಭವವನ್ನು ತರುವ ಪದ್ಯವಿದು. 'ನಾವು ಮನುಜರು ಕಾಕುಬಲರು, ಸಾಕು ಸಾಕಂಜುವೆವು' ಅನ್ನುವ ಮಾತು ಭೀಮನ ಬಾಯಿಂದ ಬಂದು ಅರಿವಿಲ್ಲದೆಯೇ ಒಟ್ಟಾರೆ ಮನುಜಕುಲವನ್ನು ಪ್ರತಿನಿಧಿಸುವ ಭೀಮನ ಸ್ಥಿತಿ ನಿಜವಾಗಿ ಅತ್ಯದ್ಭುತ ಕಲಾಕುಸುರಿಯೇ ಸರಿ ಎನ್ನಲು ಅಡ್ಡಿಯಿಲ್ಲ.

ಕಾವ್ಯವೊಂದರ ಉದ್ದೇಶವನ್ನು ಪ್ರತಿಯೊಂದು ಕಾವ್ಯದ ಸೂಕ್ಷ್ಮಭಾಗಗಳಲ್ಲಿ ತಂದೂ ಸಹ ಎಲ್ಲಿಯೂ ಉದ್ದೇಶಕ್ಕೆ ಧಕ್ಕೆ ಬಾರದಂತೆ ನಡೆಸುವ ಕಾವ್ಯಕುಶಲತೆಯಿಂದಲೇ ಇಂದಿಗೂ ಕುಮಾರವ್ಯಾಸ ಭಾರತವು ಎಲ್ಲರನ್ನೂ ಆದರಿಸಿ ಕೇಳುವಂತೆ ಪ್ರೇರೇಪಿಸುತ್ತದೆ.

**ಪರಾಮರ್ಶನ ಗ್ರಂಥಗಳು**


- ಭಟ್ ಜಿ.ಎಸ್. (2006). *ಕುಮಾರವ್ಯಾಸನ ಕರ್ಣಾಟಭಾರತ ಕಥಾ ಮಂಜರಿ ಪ್ರವೇಶ.* ಅಕ್ಷರ ಪ್ರಕಾಶನ.
- ಗೋವಿಂದ ಭಟ್ ಕೆ. (2023, ಮಾರ್ಚ್ 21). *ಮಹಾಭಾರತ: ಅರಣ್ಯ ಪರ್ವ.* *https://gomangala.com.*
- ಜವರೇಗೌಡ, ದೇ. (1978). *ಗದುಗಿನ ಭಾರತ: ಒಂದು ಸಾಂಸ್ಕೃತಿಕ ಅಧ್ಯಯನ.* ಕರ್ನಾಟಕ ವಿಶ್ವವಿದ್ಯಾಲಯ.